# ಇರಿಯಾ ಗಿಟಾರ್ ಪ್ರೀತಿ



ಸ್ಪೈನ್‌ನಿಂದ ಬಂದ ಇರಿಯಾ ಇಗ್ನೇಷಿಯಸ್

ಸಂಗೀತ ವಿಶ್ವಭಾಷೆ, ಹೃದಯ ಭಾಷೆ ಎಂಬುದು ಜಗತ್ತಿನ ಎಲ್ಲ ಮೂಲೆ ಮೂಲೆಗಳಿಂದಲೂ ಸಾಬೀತಾಗುತ್ತಾ ಬಂದಿದೆ. ಏಕೆಂದರೆ ಸಂಗೀತಕ್ಕೆ ದೇಶ, ಭಾಷೆ, ಜಾತಿಗಳ ಹಂಗಿಲ್ಲ. ಅದು ನಿರಂತರ ಹರಿಯುವ ಜೀವನದಿ. ವಿದೇಶಗಳಿಂದ ಕರ್ನಾಟಕಕ್ಕೆ ಬಂದವರು ಸಂಗೀತಕ್ಕೆ ಮಾರುಹೋಗಿ ಅದರಲ್ಲೇ ಬದುಕನ್ನೂ ಕಟ್ಟಿಕೊಂಡವರು ಇದ್ದಾರೆ. ಸ್ಪೈನ್‌ನಿಂದ ಬಂದ ಇರಿಯಾ ಇಗ್ಲೇಷಿಯಸ್ ಸಂಗೀತದೊಂದಿಗೆ ಬದುಕುತ್ತಿರುವ ಪ್ರತಿಭಾನ್ವಿತೆ.

ಹೌದು, ಇರಿಯಾ ಇಗ್ಲೇಷಿಯಸ್ ಸ್ಪೈನ್ ನಿಂದ ಬೆಂಗಳೂರಿಗೆ ಬಂದವರು. ಆದರೆ ಈಕೆ ಖಾಯಂ ಆಗಿ ಬೆಂಗಳೂರಿನಲ್ಲೇ ನೆಲೆ ನಿಂತವರಲ್ಲ. ಒಂದು ರೀತಿಯ ಅಲೆಮಾರಿ ಬದುಕು ಈಕೆಯದು ಎನ್ನಬಹುದು. ಮೊದಲಿಗೆ ಬ್ಯುಸಿನೆಸ್ ಅನಲಿಸ್ಟ್ ಆಗಿದ್ದ ಇರಿಯಾ, ಪಾಶ್ಚಾತ್ಯ ಸಂಗೀತ ಟ್ರೂಪ್ ಒಂದರಲ್ಲಿ ಸಂಗೀತವನ್ನೂ ಹಾಡುತ್ತಾರೆ. ಹೀಗಾಗಿ ಪ್ರತಿ ವಾರಾಂತ್ಯಗಳಲ್ಲಿ ದಕ್ಷಿಣ ಏಷ್ಯಾ ರಾಷ್ಟ್ರಗಳ ವಿವಿಧೆಡೆ ಕಾರ್ಯಕ್ರಮ ನೀಡಲು ತೆರಳುತ್ತಾರೆ. ಉಳಿದ ದಿನಗಳಲ್ಲಿ ಡಿ ಜೆ (ಡಿಸ್ಕ್ ಜಾಕಿ) ಆಗಿ ಕೆಲಸ ಮಾಡುತ್ತಾರೆ.

'ನಾನು ಸ್ಪೈನ್‌ನಲ್ಲಿ ಇರುವಾಗಲೇ ಡಿ ಜೆ ಆಗಿ ಕೆಲಸ ಮಾಡುತ್ತಿದ್ದೆ. ಆದರೆ ಅಲ್ಲಿ ಕಮರ್ಷಿಯಲ್ ಆಗಿ ಮಾಡುತ್ತಿರಲಿಲ್ಲ. ಗಿಟಾರ್ ನುಡಿಸುವುದು ಎಂದರೆ ನನಗೆ ಬಹಳ ಇಷ್ಟ. ಹವ್ಯಾಸಕ್ಕಾಗಿ ನುಡಿಸುತ್ತಿದ್ದೆ. ಆದರೆ ಭಾರತಕ್ಕೆ ಬಂದ ಮೇಲೆ ಸಂಗೀತಕ್ಕೆ ಒಳ್ಳೊಳ್ಳೆಯ ಅವಕಾಶ ಸಿಗಲಾರಂಭಿಸಿತು. ಹೀಗಾಗಿ ಹವ್ಯಾಸವನ್ನು ವೃತ್ತಿಯನ್ನಾಗಿ ಮಾಡಿಕೊಂಡೆ' ಎಂದು ಹೇಳುತ್ತಾರೆ ಇರಿಯಾ.

'ಇಲ್ಲಿನ ಸಂಗೀತಕ್ಕೂ ಸ್ಪೈನ್‌ನ ಸಂಗೀತಕ್ಕೂ ಬಹಳ ವ್ಯತ್ಯಾಸವಿದೆ. ಹೀಗಾಗಿ ನಾನು ನುಡಿಸುವ ಗಿಟಾರ್ ಇಲ್ಲಿ ಮೊದಮೊದಲು ಹೆಚ್ಚು ಜನಪ್ರಿಯವಾಗಲಿಲ್ಲ. ಆದರೆ ನಾನು ಇದನ್ನು ಹೆಚ್ಚಾಗಿ ಪ್ರೀತಿಸುವ ಕಾರಣ, ಇಲ್ಲಿನವರ ಅಭಿರುಚಿ ಅರಿತು ಗಿಟಾರ್ ನುಡಿಸಲಾರಂಭಿಸಿದೆ. ಜತೆಗೆ ನನ್ನ ಮನಃ ಸಂತೋಷಕ್ಕಾಗಿಯೂ ನುಡಿಸುತ್ತೇನೆ' ಎನ್ನುತ್ತಾರೆ ಇವರು.

'ಸ್ಪೈನ್‌ನ ಸ್ಯಾನ್ ಸೆಬಾಸ್ಟೀನ್ ಎಂಬ ಪ್ರದೇಶ ನನ್ನ ಸ್ವಂತ ಊರು. ಇದು ಪ್ರಪಂಚದ ಅತ್ಯುತ್ತಮ ಸುಂದರ ತಾಣಗಳಲ್ಲಿ ಒಂದು. ಎಲ್ಲ ಕಡೆ ಬೀಚ್, ಗಿರಿ ಕಂದರಗಳಿಂದ ಕೂಡಿದ ತಂಪು ತಾಣಗಳಿವೆ. ಹೀಗಾಗಿ ನಾನು ನನ್ನ ಹುಟ್ಟೂರನ್ನು ಬಹಳ ಪ್ರೀತಿಸುತ್ತೇನೆ' ಎಂದು ಕಣ್ಣರಳಿಸುತ್ತಾರೆ.

ಸ್ಪೈನ್ ನಲ್ಲಿ ಬಹುತೇಕ ಎಲ್ಲರೂ ಚೆನ್ನಾಗಿ ಓದುತ್ತಾರೆ, ಉದ್ಯೋಗ ಹುಡುಕುತ್ತಾರೆ, ಕಾರ್ಪೊರೇಟ್ ವೃತ್ತಿಯಲ್ಲೇ ತೊಡಗಿಸಿಕೊಳ್ಳುತ್ತಾರೆ. ಇದು ನನಗೆ ಇಷ್ಟವಾಗಲ್ಲ. ಹೀಗಾಗಿ ನಾನು ಸಂಗೀತದ ಜತೆಗೇ ಬೆಂಗಳೂರಿಗೆ ಬಂದೆ. ಇಲ್ಲಿ ಸ್ಟಾರ್ ಹೋಟೆಲ್‌ಗಳಲ್ಲಿ ನಡೆಯುವ ಪಾರ್ಟಿಗಳಲ್ಲಿ, ಗೆಟ್ ಟುಗೆದರ್‌ಗಳಲ್ಲಿ ಗಿಟಾರ್ ನುಡಿಸುತ್ತೇನೆ. ಕೆಲವೊಂದು ಹಬ್ಬದ ಸಂದರ್ಭಗಳಲ್ಲೂ ಗಿಟಾರ್ ನುಡಿಸಲು ಕರೆ ಬರುತ್ತದೆ. ಕಳೆದ ನಾಲ್ಕು ವರ್ಷಗಳಷ್ಟು ಹಿಂದಿನ ಪರಿಸ್ಥಿತಿಗೆ ಹೋಲಿಸಿದರೆ ಈಗ ಸಂಗೀತದಲ್ಲಿ ಬಹಳಷ್ಟು ಬದಲಾವಣೆ ಆಗಿದೆ. ಹೆಚ್ಚು ಹೆಚ್ಚು ಅವಕಾಶಗಳು ದಕ್ಷಿಣ ಏಷ್ಯಾ ದೇಶಗಳಿಂದ ನನಗೆ ಸಿಗುತ್ತದೆ' ಎಂಬ ವಾಸ್ತವವನ್ನು ಬಿಚ್ಚಿಡುತ್ತಾರೆ ಈ ಸಂಗೀತಗಾರ್ತಿ.

'ಭಾರತದಲ್ಲಿ ಹೆಚ್ಚಾಗಿ ಉತ್ತರ ಭಾರತದ ಹಲವು ಕಡೆಗಳಲ್ಲಿ ಪ್ರವಾಸ ಮಾಡಿ ಬಂದಿದ್ದೇನೆ. ಜೈಪುರ,ವಾರಣಾಸಿ, ಉದಯಪುರಗಳಲ್ಲಿ ಹೈದರಾಬಾದ್, ಮುಂಬಯಿ, ಪುಣೆ, ಚೆನ್ನೈಗಳಲ್ಲಿ ಸಂಗೀತ ಕಾರ್ಯಕ್ರಮಗಳನ್ನು ನೀಡಿದ್ದೇನೆ. ಕೇರಳ ಮತ್ತು ಗೋವಾಗಳನ್ನೂ ನೋಡಿದ್ದೇನೆ ಎನ್ನುವ ಇರಿಯಾ ಗೋವಾದಲ್ಲಿ ಸುಮಾರು ಎಂಟು ತಿಂಗಳ ಕಾಲ ವಾಸವನ್ನೂ ಮಾಡಿದ್ದೇನೆ' ಎನ್ನುತ್ತಾರೆ.

'ಬೆಂಗಳೂರಿನಲ್ಲಿ ಜನರ ಹೊಂದಾಣಿಕೆ ಮನೋಭಾವನೆ ಕಂಡು ಬೆರಗಾಗಿದ್ದೇನೆ. ಜಗತ್ತಿನ ಯಾವುದೇ ದೇಶಗಳಲ್ಲೂ ಇಷ್ಟೊಂದು ಹೊಂದಿಕೊಳ್ಳುವ ಮನೋಭಾವ ಇರುವ ಜನರು ಸಿಗುವುದು ಬಹಳ ಕಷ್ಟ' ಎಂಬುದು ಇರಿಯಾ ಅಭಿಪ್ರಾಯ.

★ ಅವನೀಶ್